ಮುಟ್ಟಿತ್ತು. ಮಗಳೆಂದರೆ ಜೀವವನ್ನೇ ಇಟ್ಟಿದ್ದ ಅವನು ಒಮ್ಮೆಲೇ ಹುಚ್ಚನಂತಾದ. ಸಿಕ್ಕಸಿಕ್ಕ ಕಡೆ ನ್ಯಾಯಕ್ಕಾಗಿ ತಂದೆ, ಮಗ ಇಬ್ಬರೂ ಅಲೆದರು. ಆದರೆ, ನ್ಯಾಯ ಎಲ್ಲೂ ಸಿಗಲಿಲ್ಲ. ಪುರಾವೆಗಳು ಬೇಕೆಂದರು, ಸಾಕ್ಷಿಗಾಗಿ ಊರಿನ ಜನ ಬೇಕೆಂದರು. ಆದರೆ ಯಾರೂ ಹಾರಪ್ಪನ ಜೊತೆಗೆ ನಿಲ್ಲಲಿಲ್ಲ. ಆ ಕಾಮುಕ ಅದೇ ಊರಿನ ಮೇಲ್ಜಾತಿಯವನಾದ್ದರಿಂದ, ಊರಿಗೆ ಊರೇ ಬಾಯಿ ಜಡಿದುಕೊಂಡಿತು. ಆಫೀಸು, ಸ್ಟೇಷನ್ನಿಗೆ ಲಂಚ ಕೊಟ್ಟರೆ ಮಾತ್ರ ಏನಾದರೂ ಕೆಲಸವಾದೀತೆಂದುಕೊಂಡು ಇದ್ದ ಎಲ್ಲವನ್ನೂ ಸುರಿದರು. ಆದರೆ, ಆ ಕಾಮುಕನ ಕಡೆಯವರು ಅದಕ್ಕಿಂತ ಹೆಚ್ಚಾಗಿ ಬಾಡು ಬಡಿಸಿದ್ದರೇನೋ? ಅಲ್ಲಿಯೂ ಏನೂ ಆಗಲಿಲ್ಲ.

ಮಗಳಿಗೆ ನ್ಯಾಯವನ್ನೂ ಕೊಡಿಸದಾದ ನಾನು ಇದ್ದರೆಷ್ಟು ಸತ್ತರೆಷ್ಟು ಅಂದುಕೊಂಡ ಹಾರಪ್ಪನಿಗೆ ಅಸಹಾಯಕತೆ ಕಾಡತೊಡಗಿತು. ರಂಗಮ್ಮ ಕನಸಿನಲ್ಲಿ ಬಂದು 'ಅಪ್ಪಾ' ಎಂದಂತಾಗುತ್ತಿತ್ತು. ಮಗಳ ಸಾವಿನ ನಡುವೆ ಮುನಿಯನ ನೆನಪನ್ನೂ ತಂದುಕೊಳ್ಳಲಿಲ್ಲ. ಇದೆಲ್ಲದರಿಂದ ಮುಕ್ತಿ ಬಯಸಿ, ಈ ಹೊಲಸು ಸಮಾಜದಲ್ಲಿ ಇರಲಾರೆ ಎನ್ನುತ್ತಾ ಆತ್ಮಹತ್ಯೆಗೆ ಸಜ್ಜಾದ. ಒಂದು ರಾತ್ರಿ ಬಾನಪ್ಪನಿಲ್ಲದ ಸಮಯ ನೋಡಿಕೊಂಡು ತನ್ನನ್ನು ತಾನೇ ದಹಿಸಿಕೊಂಡನು. ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡನು. ಅದು ಕ್ರೋಧಾಗ್ನಿ. ಸುಟ್ಟಷ್ಟೂ ಬೆಂಕಿ ಹೊತ್ತುತ್ತಲೇ ಹೋಯ್ತು.

ಒಂದೆಡೆ ತಂಗಿಯ ಸಾವು, ಮತ್ತೊಂದೆಡೆ ಅಪ್ಪ ಆತ್ಮಹತ್ಯೆ ಮಾಡಿಕೊಂಡ. ಬಾನಪ್ಪನಿಗೆ ಆಕಾಶವೇ ಉರುಳಿಬಿತ್ತು. ಊರು, ಜನ, ಪೊಲೀಸು, ಕೋರ್ಟು ಯಾವುದೂ ಕೈ ಹಿಡಿಯಲಿಲ್ಲ. ನ್ಯಾಯ ಕೊಡಿಸಲಿಲ್ಲ. ಈಗಲೂ ತಾನೇಕೆ ಹೀಗೆ ಸುಮ್ಮನಿರಬೇಕೆಂದುಕೊಂಡ. ಬೆನ್ನಿಗೊಂದು ಮಚ್ಚು ಸಿಕ್ಕಿಸಿಕೊಂಡು, ಯಾವುದೋ ಸುಳಿವಿನಿಂದ ಸಿಕ್ಕಿಬಿದ್ದ ಆ ಕಾಮುಕನ ಮನೆಗೆ ಹೋದನು. ಬಾಗಿಲ ಒಳಹೋಗುತ್ತಿದ್ದಂತೆಯೇ ಅವನು ಇದಿರಾದ. ಮಚ್ಚು ಎತ್ತಿದ. ರಕ್ತ ಚಿಮ್ಮಿತು. ಅವನ ರುಂಡ ಬಾನಪ್ಪನ ಪಾದಕ್ಕೆ ಉರುಳಿಬಿತ್ತು. ಬಾನಪ್ಪನಿಗೆ ತಾನೊಬ್ಬ ನಿಜವಾದ ಅಣ್ಣನೆಂಬ ಭಾವನೆ ಈಗ ಗಟ್ಟಿಯಾಗತೊಡಗಿತು. ನಂತರ, ಪೊಲೀಸರಿಗೆ ವಿಷಯ ತಿಳಿದರೆ ತನಗೆ ಪ್ರಾಮಾಣಿಕತೆಯೇ ಸತ್ತುಬಿದ್ದ ಜೈಲು ಜಾಗವೇ ಕಾಯಂ ಆದೀತೆಂದುಕೊಂಡು ಆ ಮಚ್ಚಿನಿಂದಲೇ ತನ್ನ ತಲೆಯನ್ನೂ ಕತ್ತರಿಸಿಕೊಂಡ. ತಂಗಿಯ ಸಾವಿಗೆ ಈಗ ನ್ಯಾಯ ಕೊಡಿಸಿದ ತೃಪ್ತಿ ಅವನಲ್ಲಿತ್ತು. ತಂದೆಯನ್ನು ಕಳೆದುಕೊಂಡ ಅಪಾರ ವಿಷಾದವಿತ್ತು. ತಮ್ಮ ಹೇಗೋ ಬದುಕಿಕೊಳ್ಳುತ್ತಾನೆಂಬ ಧೈರ್ಯವಿತ್ತು. ಹೀಗೇ ಸಮಾಜದ ಹಲವಾರು ಮಗ್ಗಲುಗಳಿಂದ ಉಂಟಾದ ಕ್ರೌರ್ಯಕ್ಕೆ ಹಾರಪ್ಪನ ಕುಟುಂಬವೇ ನಿರ್ನಾಮವಾಯಿತು. ಮುನಿಯನೊಬ್ಬನನ್ನು ಬಿಟ್ಟು!

* * *

ಮೇಷ್ಟ್ರು ಇದನ್ನೆಲ್ಲ ಹೇಳುತ್ತಿದ್ದರೆ, ಏನೂ ಗೊತ್ತಿಲ್ಲದ ನನ್ನನ್ನೂ ಸೇರಿ ಮೊದಲೇ ವಿಷಯ ತಿಳಿದ ಅಲ್ಲಿನ ಎಲ್ಲರಲ್ಲೂ ಭಾವುಕತೆ ಆವರಿಸಿತು. ಕೆಲವರಿಗೆ ತಮ್ಮ ತಪ್ಪುಗಳ ಅರಿವೂ ಆಯಿತು. ಅಷ್ಟರಲ್ಲೇ ಹುಡುಕಲು ಹೋದ ಒಂದಿಬ್ಬರು ಹುಡುಗನೊಬ್ಬನನ್ನು ಪತ್ತೆಹಚ್ಚಿ ನಾಯಿಯಂತೆ ಎಳೆದು ತಂದರು. ಅವನೇ ಮುನಿಯ! ಆ ಚಿಕ್ಕ ಹುಡುಗನ ಕಣ್ಣುಗಳಲ್ಲಿ ಒಂದು ಬಗೆಯ ರೋಷ ತಾಂಡವಿಸುತ್ತಿತ್ತು. ಯಾರು ಎಷ್ಟೇ ಕರುಣೆಯಿಂದ ನೋಡಿದರೂ ಅವನಿಗೆ ಎಲ್ಲರ ಮೇಲೆ ತಿರಸ್ಕಾರ. ಈಗ ಆ ಹುಡುಗ ದೈನೇಸಿ ಯಾತನೆಯನ್ನು ಅನುಭವಿಸುತ್ತಿರುವ ಅನಾಥ. ಎಲ್ಲರನ್ನೂ ಕಳೆದುಕೊಂಡ. ಕಡೇ ಪಕ್ಷ ಯಾರ ಹೆಣವನ್ನೂ ನೋಡಲಾಗಲಿಲ್ಲ. ಇದೆಲ್ಲ ಗತಿಸಿಹೋಗಿ ವಾರ ಕಳೆದ ಮೇಲೆ ಹೇಗೋ ವಿಷಯ ತಿಳಿದು ಊರಿಗೆ ಬಂದಿದ್ದಾನಂತೆ. ಎಲ್ಲವೂ ತಾನಾದ ಅಕ್ಕ, ರಾಶಿ ಕನಸಿನ ಮೂಟೆಯನ್ನೇ ಹೊತ್ತಿದ್ದ ಅಪ್ಪ, ಬಲವಾಗಿ ನಿಂತಿದ್ದ ಅಣ್ಣ ಎಲ್ಲರೂ ಅವನನ್ನು ಬಿಟ್ಟು ನಡೆದಿದ್ದಾರೆ. ಏನು ಮಾಡಬೇಕೆಂದು ತಿಳಿಯದೇ, ಬಂದವನೇ ತನ್ನನ್ನು ಅಷ್ಟು ದೂರ ಓದಲು ಕಳುಹಿಸಿಕೊಟ್ಟ ಮೇಷ್ಟ್ರನ್ನು ಭೇಟಿಯಾದ. ಅಲ್ಲಿಂದ ಹೊರಡಿ ಗುಡಿಸಿಲಿಗೆ ಹೋದ. ಅಲ್ಲೇನೇನನ್ನೋ ಹೆಕ್ಕಿ ತೆಗೆದು ಯಾರಿಗೂ ಕಾಣದಂತೆ ಚೀಲಕ್ಕೆ ಹಾಕಿಕೊಂಡ.

ಆ ಹುಡುಗ ಮೇಷ್ಟ್ರು ಕಡೆ ನೋಡಿದ. ಅವರು 'ಏನು ಮಗು, ಈ ಚಪ್ಪಲಿಯನ್ನ ಹೀಗ್ಯಾಕೆ ಕಟ್ಟಿದ್ದೀ' ಎಂದು ಕೇಳಿದರು.